# ಯೇಸು ಶಿಲುಬೆಯ ಮೇಲೆ ಏಕೆ ಸಾಯಬೇಕಾಯಿತು?

ಯೇಸುವಿನ ಮರಣದ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಈ ಪಾಠದ ವಿವರಣೆಗೆ ನೂರು ಪುಸ್ತಕಗಳ ಸರಣಿಯೂ ಸಾಲದುಣಿ ಇದರ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಲು ಇಂಥಹ ಸಾವಿರ ಪುಸ್ತಕಗಳೂ ಸಾಲದು. ಆದರೆ ಪ್ರಸ್ತುತ ಕೆಲವು ಪುರಾವಣಿಗಳನ್ನು ನೀಡಲಾಗಿದೆ.[1]

"ಎಲ್ಲರು ಪಾಪ ಮಾಡಿದ್ದಾರೆ" (ರೋಮಾಪುರ 3:23ಎ), ಮತ್ತು "ಪಾಪದ ಸಂಬಳ ಮರಣ" (ರೋಮಾಪುರ 6:23). ಪಾಪಿಗಳು - ಆತ್ಮೀಕ ಮರಣಕ್ಕೊಳಗಾಗುತ್ತಾರೆ. ಅಂದರೆ, ದೇವರಿಂದ - ಪ್ರತ್ಯೇಕವಾಗುವದು (ಎಫೆಸ 2:1, 12). ನಂತರದಲ್ಲಿ, ಮುಂದಿನ ನಿತ್ಯತ್ವದಿಂದ ಪ್ರತ್ಯೇಕವಾಗುವಂಥ "ಎರಡನೇ ಮರಣ" (ಪ್ರಕಟಣೆ 20:14; 21:8).

ಪರಿಶುದ್ಧನಾದ ದೇವರಿಗೆ, ಪಾಪವು ಅವಮಾನವಾಗಿದೆ (ರೋಮಾಪುರ 3:23ಬಿ; ಯೆಶಾಯ 5:16; ಇಬ್ರಿಯ 10:29). ಒಳ್ಳೆಯ ಕಾರ್ಯಗಳ ನಿಮಿತ್ತ "ಒಂದು ಪಾಪವಾದರೂ" ನಿವಾರಣೆಯಾಗದು. ಒಳ್ಳೆ ಕಾರ್ಯಗಳಿಂದ ರಕ್ಷಣೆ ದೊರಕಲಾಗದು (ಎಫೆಸ 2:8, 9). ನಾವು ಎಷ್ಟೇ ಉತ್ತಮವಾದದ್ದನ್ನು ಮಾಡಿದರೂ, ಅದು ರಕ್ಷಣೆಗೆ ಸರಿದೂಗಲಾರದು (ಯೆಶಾಯ 64:6; ರೋಮಾಪುರ 3:12). ದೇವರು ನೀತಿ ಸ್ವರೂಪಿಯಾದ್ದರಿಂದ (ಯೆಶಾಯ 30:18), ಪಾಪವನ್ನು ಶಿಕ್ಷಿಸದೆ ಬಿಡಲಾರನು (ನೋಡಿ ರೋಮಾಪುರ 1:18). ಪಾಪವನ್ನು ನಿವಾರಣೆ ಮಾಡಲು ಸಮರ್ಥರಾಗದೆ ಇರುವಾಗ, ಮನುಷ್ಯನ ಜೀವಿತವು ಅದೋಗತಿಯಾಗಿತ್ತು.

ದೇವರಿಗೆ ಸ್ತೋತ್ರವಾಗಲೀ. ಆತನು ನೀತಿವಂತನು ಮಾತ್ರವಾಗಿರದೇ, *ಪ್ರೀತಿಸುವ* ದೇವರೂ ಸಹ ಆಗಿರುವನು (1 ಯೋಹಾನ 4:8)! ಆತನ ಪ್ರೀತಿಯ ನಿಮಿತ್ತವಾಗಿ ಯಾರೂ ಸಹ ನಾಶವಾಗಬಾರದೆಂದು ಬಯಸುತ್ತೇನೆ (ನೋಡಿ 2 ಪೇತ್ರ 3:9). ದೇವರ ಈ ಎರಡೂ ಸ್ವಭಾವಗಳಿಂದ ಗೊಂದಲ ಏರ್ಪಾಡಾಗಬಹುದು. ಆತನು ನೀತಿವಂತನಾಗಿ, ಪಾಪವನ್ನು ಹೇಗೆ ಶಿಕ್ಷಿಸಬಹುದು, ಅದೇ ಸಮಯದಲ್ಲಿ ಪಾಪಿಗೆ *ನೀತಿ ನಿರ್ಣಯ* ಹೇಗೆ ನೀಡಬಹುದು (ರೋಮಾಪುರ 3:26)? ಈ ಗೊಂದಲಕ್ಕೆ ದೇವರು, "ನಾನೇ ಅದಕ್ಕೆ ಬೆಲೆಯನ್ನು ನೀಡುತ್ತೇನೆಣಿ ಮನುಷ್ಯರ ಪಾಪದ ಪ್ರಾಯಶ್ಚಿತಕ್ಕಾಗಿ, *ನನ್ನ ಮಗನು* ಬಾಧೆಯನ್ನು ಅನುಭವಿಸುವನು" (ನೋಡಿ ಯೋಹಾನ 3:16) ಎಂದು ಉತ್ತರಿಸಿರುವನು. 1 ಯೋಹಾನ 4:10ರಲ್ಲಿ, "ಆತನು ನಮ್ಮನ್ನು ಪ್ರೀತಿಸಿ, ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜಗುಣವು ತೋರಿಬರುತ್ತದೆ." "ಪಾಪ ನಿವಾರಣೆ" ಅಂದರೆ "ಬೇಡುವನು" ಅಥವಾ "ದೇವರ ನೀತಿಗೆ ತೃಪ್ತಿ ಪಡಿಸುವನು" ಎಂಬ ಅರ್ಥವಾಗಿದೆ.

ಪಾಪ ನಿವಾರಣೆಗೆ ಅಗತ್ಯವಿರುವ ಬಾಧೆ ಏನು? ಚರಿತ್ರೆಯಲ್ಲಿ ಮನುಷ್ಯರೊಂದಿಗಿನ ದೇವರ *ಸಂಬಂಧದಲ್ಲಿ* - ಒಂದು ಜೀವಕ್ಕಾಗಿ, ಇನ್ನೊಂದು - ಜೀವವನ್ನು ಪರಿಹಾರವಾಗಿ ನೀಡಬೇಕಿತು (ಆದಿಕಾಂಡ 4:4; 8:20ಣಿ 31:54; ನೋಡಿ 12:7). ಘೋಷಣೆ ಮಾಡಲಾಯಿತು: "... ರಕ್ತಧಾರೆ ಇಲ್ಲದೆ ಪಾಪ ಪರಿಹಾರವಿಲ್ಲ" (ಇಬ್ರಿಯ 9:22). ದೇವರ ಈ ಮಾರ್ಗದರ್ಶನದಂತೆ, ಸಾವಿರಾರು ಪ್ರಾಣಿಗಳ ಪ್ರಾಣ ತೆಗೆಯಲಾಯಿತು. ಆದರೆ ಅಲ್ಲಿ ಉದ್ಭವಿಸಿದ ಸಮಸ್ಯೆ ಏನೆಂದರೆ "ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರ ವಾಗುವದು ಅಸಾಧ್ಯವಾಯಿತು" (ಇಬ್ರಿಯ 10:4). ಒಂದೇ ಒಂದು ಯಜ್ಞವು ಮಾಡಬಲ್ಲದು: ಸಂಪೂರ್ಣ ದೇವರ ಮಗನು (ನೋಡಿ 1 ಪೇತ್ರ 1:18, 19). "ದೇವರ ಕೋಪದಿಂದ" ನಮ್ಮನ್ನು ಆತನ

ರಕ್ತವು ಮಾತ್ರವೇ ರಕ್ಷಿಸಬಲ್ಲದು (ರೋಮಾಪುರ 5:9). "ಪಾಪದ ಕ್ಷಮಾಪಣೆಗಾಗಿ" ಕ್ರಿಸ್ತನ ಅಮೂಲ್ಯವಾದ ರಕ್ತವನ್ನು "ಸುರಿಸಲ್ಪಡಬೇಕಾಯಿತು" (ಮತ್ತಾಯ 26:28).

ಆತನು ರಕ್ತ ಸುರಿಸಿದ ವಿಧಾನವೇನು? ದೇವರ ನಿತ್ಯವಾದ ಉದ್ದೇಶದಲ್ಲಿ (ಎಫೆಸ 3:11). "ಕ್ರೂಜೆಯ ಮರಣ" ಪೂರ್ವಕಾಲದಲ್ಲಿಯೇ ಯೋಜಿತವಾಗಿತ್ತು. ಕೀರ್ತನೆಗಾರನ ಪ್ರಕಾರ, ನನ್ನ ಕೈಕಾಲುಗಳನ್ನು ತಿವಿದಿದ್ದಾರೆ (ಕೀರ್ತನೆ 22:16). ತನ್ನ ಕ್ರೂಜೆಯ ಮರಣದ ಕುರಿತು ಯೇಸು ಮುಂದಾಗಿಯೇ ತಿಳಿಸಿದ್ದನು (ಮತ್ತಾಯ 20:17-19; ನೋಡಿ ಲೂಕ 24:6-8) - ಅಂದರೆ ಅದರಲ್ಲಿ ಕೈಕಾಲುಗಳನ್ನು ತಿವಿಯುವ ವಿಧಾನವು ಸಹ ಒಳಗೊಂಡಿರುತ್ತದೆ.[2] ರೋಮಾಯರ ಶಿಲುಬೆಯಲ್ಲಿ ಆತನು ಸತ್ತಾಗ, ಆತನ ತಿವಿದ ಕೈಗಾಲುಗಳಿಂದ ಹಾಗೂ ಬೆನ್ನು ಮುಖಗಳಿಂದ ರಕ್ತವು ಸೋರುತ್ತಿತ್ತು. ಮರಣಿಸಿದ ನಂತರ ಆತನ ಪಕ್ಕೆಯಿಂದ ರಕ್ತವು ಚಿಮ್ಮಿತು (ಯೋಹಾನ 19:34). ಸತ್ಯವೇದದ ಪ್ರಕಾರ, ನಾವು ನೀತಿವಂತರಾದೆವು, ಸಂಧಾನಗೊಂಡೆವು ಮಗನ ರಕ್ತದಿಂದ, ದೇವರ ಕೋಪದ ಶಮನವನ್ನು ಪಡೆದುಕೊಂಡೆವು (ರೋಮಾಪುರ 5:9, 10).

ಯೇಸುವಿನ ಮರಣದಿಂದ ಆದ ರಕ್ಷಣೆಯನ್ನು ಹೇಗೆ ಅರಿಯಬಹುದು ಅರಿಯಲು ಸಾಧ್ಯವಿರದೆ ಇರಬಹುದು? ಇಲ್ಲ - ಆದರೆ ಒಂದು ಸಂಗತಿ ಸ್ಪಷ್ಟವಾಗಿದೆ: ಆತನ ಮರಣವು ದೇವರ ನೀತಿಯನ್ನು ಸಮರ್ಪಿಸುತ್ತದೆ (ರೋಮಾಪುರ 3:25; ಇಬ್ರಿಯ 2:17; 1 ಯೋಹಾನ 2:2). ಆದ್ದರಿಂದ, ಆತನ ಪ್ರೀತಿಗೆ ಪ್ರತಿಕ್ರಿಯಿಸುವವರು (ಯೋಹಾನ 14:15; 1 ಯೋಹಾನ 4:19). ಆತನ ರಕ್ಷಣೆ ನಿಯಮಗಳನ್ನು ಅಂಗೀಕರಿಸುವವರು (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:37, 38) ರಕ್ಷಣೆ ಹೊಂದುವರು! ಕರ್ತನು ಮಾಡಿರುವ ಈ ಕಾರ್ಯವನ್ನು ಗ್ರಹಿಸಲಾರದೆ ಹೋದರೂ, ಅದಕ್ಕಾಗಿ ಸ್ತೊತ್ರ ಮಾಡಬಹುದು. "ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ ಸ್ತೋತ್ರ!" (2 ಕೊರಿಂಥ 9:15).

---

ಟಿಪ್ಪಣಿಗಳು

[1]"ದೇವರ ಪ್ರೀತಿಯ ಕೇಂದ್ರ" ಎಂಬ ಚರ್ಚೆಯ ಮುಖಾಂತರ ಕೊಡಲ್ಪಟ್ಟಿದೆ David Roper, *Jesus Christ and Him Crucified* (Arvada, Colo.: Christian Communications, 1976). ಪುಸ್ತಕದಲ್ಲಿ ಈ ವಿಚಾರವನ್ನು ಆಳವಾಗಿ ಚರ್ಚಿಸಲಾಗಿದೆ. [2]ಜೆಕರ್ಯನ ಪುಸ್ತಕದಲ್ಲಿ ಮೆಸ್ಸೀಯನ ಕುರಿತು ಬೇರೆ ರೀತಿಯಲ್ಲಿ "ಚುಚ್ಚುವದು" ಇದರ ಕುರಿತು ಜೆಕರ್ಯ 12:10ರಲ್ಲಿ ವಿವಿಧ ರೀತಿಯಲ್ಲಿ ವರ್ಣಿಸಿದ್ದಾನೆ (ನೋಡಿ ಯೋಹಾನ 19:34, 37).